**2011ರಲ್ಲಿ ಮೂಡಾ ನಿವೇಶನ ಅಕ್ರಮ ಹಂಚಿಕೆ ಕುರಿತು ಬಿಜೆಪಿಯಿಂದ ಜೆಡಿಎಸ್ ಮೇಲೆ ಗುರುತರ ಆರೋಪ**

1. ಮೈಸೂರಿನ ಮೂಡಾ ಹಗರಣಕ್ಕೆ ಸಂಬಂಧಪಟ್ಟಂತೆ 17-03-2011 ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ವಿಧಾನ ಪರಿಷತ್ತಿನ ಸಭಾಪತಿಗಳಿಗೆ ದಾಖಲೆಗಳನ್ನು ಸಲ್ಲಿಕೆ ಮಾಡಿ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೇಗೌಡರು ತಮ್ಮ ಕುಟುಂಬಕ್ಕೆ 48 ನಿವೇಶನಗಳ ಹಂಚಿಕೆ ಮಾಡಿರುವುದನ್ನು ಪ್ರಸ್ತಾಪಿಸಿದ್ದಾರೆ. ಅವರ ಅಷ್ಟೂ ಆರೋಪಗಳು ವಿಧಾನ ಪರಿಷತ್ತಿನ ನಡವಳಿಕೆಗಳಲ್ಲಿ ದಾಖಲಾಗಿರುತ್ತದೆ.

2. ಈ ಆರೋಪದಲ್ಲಿ ಹೆಚ್.ಡಿ.ಕುಮಾರಸ್ವಾಮಿರವರಿಗೆ 300X200 ಅಡಿ ಅಳತೆಯ (ಸುಮಾರು 60 ಸಾವಿರ ಅಡಿ) ನಿವೇಶನ ಸಂಖ್ಯೆ.17(ಬಿ) ಹಂಚಿಕೆಯಾಗಿರುವುದಾಗಿ ಹೇಳಿದ್ದಾರೆ. ಅದೇ ರೀತಿ ಅವರ ಕುಟುಂಬದ ಸವಿತ ಕೋಂ ಬೀರೇಗೌಡ ಎಂಬುವವರಿಗೆ 130x110 ಅಡಿ (ಸುಮಾರು 14300 ಅಡಿ) ಅಕ್ರಮ ಹಂಚಿಕೆಯ ಕುರಿತು ಆರೋಪ ಮಾಡಿದ್ದಾರೆ. ಇದರ ಸಿಬಿಐ ತನಿಖೆಗೆ ಬಿಜೆಪಿ ಒತ್ತಾಯಿಸುವುದೆ?

3. ವಿಧಾನ ಪರಿಷತ್ತಿನಲ್ಲಿ ಮಾತನಾಡುವಾಗ ಬಿಎಸ್‌ಕೆ ಮೈನಿಂಗ್ ಕಂಪನಿಯಿಂದ ದೇವೇಗೌಡರ ಕುಟುಂಬದವರಿಗೆ 167 ಕೋಟಿ ಜಮಾ ಆಗಿದೆ ಎಂದು ಆರೋಪಿಸಿದ್ದಾರೆ. ಮುಂದುವರೆದು ಜಂತ್‌ಕಲ್ ಎಂಟರ್‌ಪ್ರೈಸಸ್‌ಗೆ 40 ವರ್ಷ ನವೀಕರಣ ಮಾಡಿ ಅದರಲ್ಲಿ ಇವರ ಕುಟುಂಬದವರು ಪಾರ್ಟ್‌ನರ್ ಇದ್ದಾರೆ ಎಂದು ಆರೋಪಿಸಿದ್ದಾರೆ. ತಾವು ಮಾಡಿದ ಆರೋಪಗಳಿಗೆ ಪೂರಕವಾಗಿ ದಾಖಲೆಗಳನ್ನು ಸಭಾಪತಿಗಳಿಗೆ ಸದನದಲ್ಲಿ ಮಂಡಿಸಿದ್ದಾರೆ.

4. ಬಿಜೆಪಿ ನಾಯಕರಿಗೆ ಅಂದಿನ ಬಿಜೆಪಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು ಸದನದಲ್ಲಿ ಮೂಡಾ ಅಕ್ರಮ ನಿವೇಶನ ಹಂಚಿಕೆ ಕುರಿತು ದೇವೇಗೌಡರ ಕುಟುಂಬದ ಮೇಲೆ ಮಾಡಿರುವ ಗಂಭೀರ ಆರೋಪದ ಮೇಲೆ ತನಿಖೆಗೆ ಒತ್ತಾಯಿಸಲು ತಾಕತ್ತು ಇದಯೇ? ಯಡಿಯೂರಪ್ಪನವರು ದಾಖಲೆಗಳನ್ನು ಸಭಾಪತಿಗಳಿಗೆ ಮಂಡಿಸಿದರೂ ಇಲ್ಲಿಯವರೆಗೆ ಬಿಜೆಪಿ ಯಾವ ಕಾರಣಕ್ಕೆ ಮೌನವಾಯಿತು?

5. ಅವಕಾಶವಾದದ ರಾಜಕಾರಣ ಮತ್ತು ಅನುಕೂಲ ಸಿಂಧು ರಾಜಕಾರಣಕ್ಕೆ ಶರಣಾಗಿರುವ ಬಿಜೆಪಿ, ಮೂಡಾ ಹಗರಣದಲ್ಲಿ ಯಾವ ಯಾವ ಬಿಜೆಪಿ ನಾಯಕರು ಎಷ್ಟು ಎಷ್ಟು ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಬಹಿರಂಗಗೊಳಿಸಲಿ. ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮೈಸೂರಿನ ಮೂಡಾದಲ್ಲಿ ಹೆಚ್ಚು ಹಗರಣಗಳು ನಡೆದಿರುತ್ತವೆ.

6. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪರಿಹಾರ ರೂಪದಲ್ಲಿ ಭೂ ಮಾಲೀಕರಿಗೆ ನಿವೇಶನ ನೀಡಿರುವುದನ್ನು ಬಿಜೆಪಿ ರಾಜಕೀಯ ಕಾರಣಕ್ಕಾಗಿ ಆರೋಪ ಮಾಡುತ್ತಿದೆ. ಆದರೆ ಯಾವುದೇ ಭೂಮಿಯನ್ನು ಕಳೆದುಕೊಳ್ಳದೆ ತಮ್ಮ ರಾಜಕೀಯ ಪ್ರಭಾವದ ಮೂಲಕ ಒಂದೇ ಕುಟುಂಬ 48 ನಿವೇಶನಗಳನ್ನು ಪಡೆದುಕೊಂಡ ಅಕ್ರಮ ಕುರಿತು ಬಿಜೆಪಿ ಚಕಾರ ಎತ್ತುವುದಿಲ್ಲ. ಅದೇ ರೀತಿ ಒಬ್ಬನೇ ವ್ಯಕ್ತಿಗೆ ಯಾವ ಆಧಾರದ ಮೇಲೆ 60 ಸಾವಿರ ಅಡಿ ಅಳತೆಯ ನಿವೇಶನ ಮಂಜೂರಾಗಿತ್ತು? ಸದನದ ಒಳಗೆ ದಾಖಲೆಯಿಟ್ಟು ಮಾತನಾಡಿದ ಯಡಿಯೂರಪ್ಪನವರಿಗೆ ಸಾರ್ವಜನಿಕವಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ ಏಕೆ?

**ಸಂಗ್ರಹ: ರಮೇಶ್ ಬಾಬು**

## ಕರ್ನಾಟಕ ವಿಧಾನ ಪರಿಷತ್ತು

## ಗುರುವಾರ, 17ನೇ ಮಾರ್ಚ್ 2011

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ
ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 02 ನಿಮಿಷಕ್ಕೆ
ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ. ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ
ಉಪಸ್ಥಿತರಿದ್ದರು

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ. ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆ? ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ. ಮೊನ್ನೆ ದಿವಸ ನೀವು ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದೀರಿ. ಆದರೆ ಈಗ ತಾವು ಅದೇ ಉತ್ತರವನ್ನು ಹೇಳುತ್ತೀರೋ ಅಥವಾ ಇನ್ನು ಬೇರೆ ಏನಾದರು ಉತ್ತರವನ್ನು ಹೇಳುವುದಾದರೆ ಹೇಳಬೇಕೆಂದು ನಿಮ್ಮನ್ನು ಕೇಳುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯರವರೇ, ನಮ್ಮ ಕಾಂಗ್ರೆಸ್ ಪಕ್ಷದ ಸ್ನೇಹಿತರಿಗೆ ಮತ್ತು ಜೆ.ಡಿ.ಎಸ್. ಪಕ್ಷದ ಸ್ನೇಹಿತರಿಗೆ ನಾನು ಒಂದು ಮಾತನ್ನು ಪದೇ ಪದೇ ಹೇಳಿದ್ದೇನೆ. ಈ ಅಧಿವೇಶನದಲ್ಲಿ ಎಲ್ಲಾ ಹಗರಣಗಳ ಬಗ್ಗೆ ಸಮಗ್ರವಾಗಿ ಚರ್ಚೆ ಆಯಿತು. ನೀವು ಒಂದು ವಿದ್ಯಾ ಸಂಸ್ಥೆಯ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಕುಪ್ಪಂನಲ್ಲಿ ಅಂತರರಾಷ್ಟ್ರೀಯ ಮಟ್ಟದ ಮೆಡಿಕಲ್ ಕಾಲೇಜನ್ನು ಇದೇ ಪ್ರೊ|| ದೊರೆಸ್ವಾಮಿಯವರು ಅಲ್ಲಿ ಹೋಗಿ ತೆರೆದಿದ್ದಾರೆ. ಈ ದೇಶದಲ್ಲಿ ಪಿ.ಇ.ಎಸ್. ಸಂಸ್ಥೆ ಎಂದರೆ ಅತ್ಯಂತ ಗೌರವಾನ್ವಿತ ಸಂಸ್ಥೆ. ನೀವು ಪದೇ ಪದೇ ಕೇಳುತ್ತಿರುವುದೇನೆಂದರೆ, ಡೊನೇಷನ್ ಕೊಟ್ಟಿರುವವರಿಗೆ ನೀವು ಅಪ್ರತ್ಯಕ್ಷವಾಗಿ (Indirect) ಏನಾದರೂ ಸಹಾಯ ಮಾಡಿರಬೇಕು ಇಲ್ಲವೆಂದರೆ ಏಕೆ ಕೊಡುತ್ತಾರೆ ಎಂದು ಹೇಳುತ್ತಿದ್ದೀರಿ. ನಾನೂ ಸಹ ಪದೇ ಪದೇ ಹೇಳಿದ್ದೇನೆ ಅಲ್ಲಿ ಆಡಿಟೋರಿಯಂಗೆ ಅವರ ಹೆಸರಿಡಬೇಕು, ಈ ರೀತಿ ಕೆಲವೊಂದು ಮಾತುಕತೆಯಾಗಿ ಅದರಂತೆ ಬಂದು ನೋಡಿ, ಅವರು ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದು ನಿಜ. ಅದು ಜಮಾ ಆಗಿದೆ ಎಂಬ ಮಾತನ್ನು ಹೇಳಿದ್ದೇನೆ. ಆದರೆ ನೀವು ಪದೇ ಪದೇ ಏನು ಮಾಡುವುದಕ್ಕೆ ಹೊರಟಿದ್ದೀರೆಂದರೆ, ಯಡಿಯೂರಪ್ಪನವರ ಇಬ್ಬರು ಮಕ್ಕಳು ಎಂದು ಹೇಳುತ್ತೀರ ಹೊರತು ಅದರಲ್ಲಿ ಪಿ.ಇ.ಎಸ್. ಚೇರ್ಮನ್, ಅವರ ಮಗ ಮತ್ತು ಆದರ್ಶ ಡೆವೆಲಪರ್ಸ್ ಅವರು ಸಹ ಇದ್ದಾರೆ ಎಂಬ ವಿಷಯವನ್ನು ಪತ್ರಿಕೆಯವರು ಬರೆಯುವುದಿಲ್ಲ. ನೀವೂ ಹೇಳುವುದಿಲ್ಲ. ಆದರೆ ಯಡಿಯೂರಪ್ಪನವರ ಇಬ್ಬರು ಮಕ್ಕಳಿದ್ದಾರೆ ಎಂದು ಅದನ್ನು

ತಿರುಚುವಂತಹ ಪ್ರಯತ್ನ ಮಾಡುವಂಥದ್ದು ಇದು ಯಾರಿಗೂ ಗೌರವ ತರುವಂಥದ್ದು ಆಗುವುದಿಲ್ಲ. ಅದರಲ್ಲಿಯೂ ಪ್ರತಿಪಕ್ಷದ ನಾಯಕರಿಗೆ ಇದು ಗೌರವವನ್ನು ತರುವುದಿಲ್ಲ. ಮಾನ್ಯ ಸಭಾಪತಿಯವರೇ, ನಾನು ವಿರೋಧಪಕ್ಷದ ನಾಯಕರಾದಂತಹ ಶ್ರೀಮತಿ ಮೋಟಮ್ಮನವರಿಗೆ ಕೇಳುವುದೇನೆಂದರೆ, ಇವತ್ತು ಈ ವಿಷಯವನ್ನು ಬೇರೆ ರೀತಿ ತಿರುಗಿಸುತ್ತಿದ್ದೇನೆಂದು ನೀವು ತಿಳಿಯಬೇಡಿ. ಒಂದೇ ಕುಟುಂಬದವರು ಮೈಸೂರಿನ "ಮೂಡಾದಲ್ಲಿ" 48 ಸೈಟ್ ತೆಗೆದುಕೊಳ್ಳುತ್ತಾರೆ ಅದರಲ್ಲಿ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರದ್ದು 300x200Ft. Site No. 17(B) ಇನ್ನೊಂದು Site No. ನಂ.17(Bl) 75x280Ft.. ಈ ರೀತಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾನ್ಯ ದೇವೇಗೌಡರ ಕಾಲದಲ್ಲಿ ಸೈಟ್ ಕೊಡುತ್ತಾರೆ. ಸವಿತ ಎನ್ನುವಂಥವರು...

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡುವುದು ಗೌರವವಲ್ಲ. ಮಾನ್ಯ ಸಭಾಪತಿಯವರೇ, ಇವರು(ವಿರೋಧ ಪಕ್ಷದವರು) ಹೇಳುವುದಕ್ಕೆ ರೆಡಿ ಇದ್ದಾರೆ. ಆದರೆ ನಾನು ಹೇಳುವುದನ್ನು ಕೇಳುವುದಕ್ಕೆ ರೆಡಿ ಇಲ್ಲ. ಸವಿತ ಕೋಂ. ಬೀರೇಗೌಡ, ಇವರಿಗೆ 130 ಅಡಿ x 110ಅಡಿx 80 ಅಡಿ ನಿವೇಶನ ಅಂದರೆ ಒಂದೇ ದಿವಸ ಮಾನ್ಯ ದೇವೇಗೌಡರ ಕಾಲದಲ್ಲಿ 48 ಸೈಟುಗಳನ್ನು ಮಾನ್ಯ ದೇವೇಗೌಡ ಮತ್ತು ಸೊಸೆಯಂದಿರಿಗೆ ಅಲಾಟ್ ಮಾಡಿರುತ್ತಾರೆ. ಈ ರೀತಿ ಮಾಡುವುದೆಲ್ಲಾ ಲೂಟಿ ಅಲ್ಲವೇನು, ಇದು ಹಗಲು ದರೋಡೆಯಲ್ಲವೇ? ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾರೂ ಸಿದ್ದರಿಲ್ಲ.

(ಗೊಂದಲ)

ಅದೇ ರೀತಿ ನಾನು ಪದೇ ಪದೇ ಹೇಳಿದ್ದೇನೆ, ಇವತ್ತು ಬಿ.ಎಸ್.ಕೆ. ಮೈನಿಂಗ್ ಕಂಪನಿಯವರು ಅವರ ಕುಟುಂಬದವರಿಗೆ ಒಟ್ಟು 167 ಕೋಟಿ ರೂಪಾಯಿಗಳಷ್ಟು ಜಮಾ ಆಗಿದೆ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ

ಚರ್ಚೆ ಮಾಡುವುದಕ್ಕೆ ನೀವು ಸಿದ್ಧರಿಲ್ಲ. ಅದೇ ರೀತಿ ಜೆಂಥ್‌ಕಲ್ ಎಂಟರ್‌ಪ್ರೈಸಸ್‌ಗೆ, ಒಂದೇ ಸಂಸ್ಥೆಗೆ 40 ವರ್ಷಗಳ ನವೀಕರಣ ಮಾಡಿ, ಇವರು ಅದರಲ್ಲಿ Partner ಇದ್ದಾರೆ. ಗಣಿಗಾರಿಕೆ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದರ ಬಗ್ಗೆ ನೀವು ಪ್ರಸ್ತಾಪ ಮಾಡುವುದಿಲ್ಲ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಲೋಕಸಭೆಯಲ್ಲಿಯೂ ಪ್ರಸ್ತಾಪ ಮಾಡುವಂಥದ್ದು, ಇಲ್ಲಿಯೂ ಮಾಡುವಂಥದ್ದು ಮಾಡುತ್ತಿದ್ದಾರೆ. ನಾನು ಮಾನ್ಯ ನಾಣಯ್ಯನವರಿಗೆ ಕೇಳುತ್ತೇನೆ, ಶ್ರೀಮತಿ ಮೋಟಮ್ಮನವರನ್ನು ಕೇಳುತ್ತೇನೆ, ನೀವು ಆಡಳಿತ ಪಕ್ಷದಲ್ಲಿ ಇದ್ದೀರಿ, ಒಂದು ವಿಷಯದ ಬಗ್ಗೆ ನೀವು ಡಿಮ್ಯಾಂಡ್ ಮಾಡಿದ ಮೇಲೆ ಸರ್ಕಾರ ತನ್ನ ನಿಲುವನ್ನು ವ್ಯಕ್ತಪಡಿಸಿದ ಮೇಲೆ ನೀವು ನಿಮ್ಮ ಸಲಹೆ ಕೊಡಬಹುದೇ ಹೊರತು ಹೀಗೆಯೇ ಇರಬೇಕು, ಹೀಗೆಯೇ ಆಗಬೇಕೆಂದು ಹೇಳುವುದಕ್ಕೆ ನಿಮಗೇನು ಅಧಿಕಾರವಿದೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗದೆಯೇ, ನಿಮ್ಮ ಹಗಲು ದರೋಡೆಯ ಲೂಟಿಯನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ Bye-Election ಬಂದಿದೆ ಎಂದು ಯಡಿಯೂರಪ್ಪನ ಬಗ್ಗೆ ನೀವು ಆರೋಪ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಿಮಗೆ ಏನೂ ಲಾಭ ಆಗುವುದಿಲ್ಲ. ಈ ಚುನಾವಣೆಯಲ್ಲಿ ಜನರು ನಿಮಗೆ ಪಾಠ ಕಲಿಸುತ್ತಾರೆ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಒಂದು ಅಖಿಲ ಭಾರತೀಯ ಪಕ್ಷ. ತುರ್ತು ಪರಿಸ್ಥಿತಿಯಲ್ಲಿ ನಿಮಗೆ ಅಧಿಕಾರವನ್ನು ಕೊಟ್ಟಿದ್ದರು, ಆದರೆ ಈ ರೀತಿ ಟೀಕೆ ಟಿಪ್ಪಣಿಗಳನ್ನು ಮಾಡಿ ಇವತ್ತು ನಿಮ್ಮ ಅಡ್ರೆಸ್ ಇಲ್ಲದಂತೆ ಆಗಿದೆ. ನಿಮ್ಮ ಹುಳುಕನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ, ದೇವೇಗೌಡರ ಕುಟುಂಬಕ್ಕೆ ಬೆಂಬಲ ಕೊಡುವುದಕ್ಕೋಸ್ಕರ ನೀವು ಕಾಂಗ್ರೆಸ್‌ನಲ್ಲಿ ನಿಂತುಕೊಳ್ಳುವುದಾದರೆ, it is a

shame. ಒಂದು ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ. ಮಾನ್ಯ ಹೆಚ್.ಡಿ.ರೇವಣ್ಣ ಅವರ ಜೊತೆ ಕೈ ಜೋಡಿಸಬೇಡಿ, ಅಪ್ಪ ಮಕ್ಕಳ ಪಾರ್ಟಿಯಿಂದ ಈ ರಾಜ್ಯ ಸರ್ವನಾಶ ಆಗುತ್ತದೆ ಸ್ವಾಮಿ. ಮತದಾರರು ಇದನ್ನು ತೀರ್ಮಾನ ಮಾಡಿ ಅವರನ್ನು ಎಲ್ಲಿ ಇಡಬೇಕೋ ಅಲ್ಲಿ ಇಟ್ಟಿದ್ದಾರೆ ಹೀಗಿದ್ದರೂ ಸಹ ಅವರ ಜೊತೆ ಪುನಃ ಕೈಜೋಡಿಸುವುದಕ್ಕೆ ಹೊರಟಿದ್ದೀರಾ? ಇವತ್ತು ನೇರವಾಗಿ ಬಂದು ಮಾತನಾಡಲಿ. ನಾನು ನಿಮ್ಮ ಜೊತೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ. ಯಾವ ಒಂದು ಅಪ್ಪ-ಮಕ್ಕಳ ಪಕ್ಷವಾದಂತಹ ಜೆ.ಡಿ.ಎಸ್. ಪಕ್ಷ ಈ ರಾಜ್ಯವನ್ನು ಸರ್ವನಾಶ ಮಾಡಿತೋ, ಪ್ರಜಾಪ್ರಭುತ್ವದ ಬಗ್ಗೆ ವಿಶ್ವಾಸ ಇಲ್ಲವೋ, ಹಗಲು-ದರೋಡೆ ಲೂಟಿ ಮಾಡುತ್ತಿದ್ದಾರೋ, ಪಾರ್ಲಿಮೆಂಟಿನಲ್ಲಿ ನಿಂತುಕೊಂಡು ಕರ್ನಾಟಕ ರಾಜ್ಯಕ್ಕೆ ಕೊಟ್ಟಂತಹ ಅನುದಾನ ದುರುಪಯೋಗ ಆಗುತ್ತಿದೆ ಎಂದು ಹೇಳುತ್ತಿರುವಂಥ ಈ ರಾಜ್ಯದ ಪ್ರತಿನಿಧಿ, ಮಾಜಿ ಪ್ರಧಾನಿಯಾಗಿದ್ದವರು ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ಇಂಥವರ ಬಗ್ಗೆ ಚರ್ಚೆಮಾಡುವುದು ಬಿಟ್ಟು ಯಾವುದೋ ಒಂದು ವಿದ್ಯಾ ಸಂಸ್ಥೆಯ ಬಗ್ಗೆ ಮಾತನಾಡುತ್ತಿದ್ದೀರಿ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಶ್ರೀಮತಿ ಮೋಟಮ್ಮನವರೆ, ನಾನು ಇಷ್ಟು ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ, ಅದನ್ನು ಓದಿ ನೋಡಿದರೆ ನೀವೇ ಆಶ್ಚರ್ಯ ಪಡುತ್ತೀರಿ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ದಾಖಲೆಗಳನ್ನು ಮಾನ್ಯ ಸಭಾಪತಿಯವರ ಅವಗಾಹನೆಗೆ ಕಳುಹಿಸಿ ಕೊಟ್ಟರು)

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಈ ಡಾಕ್ಯುಮೆಂಟ್ ನೋಡಿದರೆ ಮೂರು ದಿವಸ ಚರ್ಚೆ ಮಾಡುವಷ್ಟು ಹಗರಣಗಳಿವೆ ಮೊಟಮ್ಮನವರೆ. ಅದರ ಬಗ್ಗೆ ಮಾತನಾಡದೆಯೇ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟ ಪಡುತ್ತಿದ್ದೀರ ನೀವು. ಮರ್ಯಾದೆ ಇದ್ದಿದ್ದರೆ ನೀವು ಈ ರೀತಿ ಆಗುತ್ತಿರಲಿಲ್ಲ.

ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದಂತಹ ಕೆಲವು ವಿರೋಧ ಪಕ್ಷದ ಸದಸ್ಯರುಗಳ ಮಧ್ಯೆ ಜೋರು ಧ್ವನಿಯ ವಾಗ್ವಾದ ನಡೆಯುತ್ತಿತ್ತು)

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಎದ್ದು ನಿಂತಿದ್ದರು)

**ಸಭಾಪತಿಯವರು:-** ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಮಾತನಾಡಬೇಡಿ. ಮಾನ್ಯ ಸಚಿವರುಗಳು ಅವರವರ ಸ್ಥಾನದಲ್ಲಿ ಕುಳಿತುಕೊಳ್ಳಿ.ಮಾತನಾಡಬೇಡಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

**ಸಭಾಪತಿಯವರು:-** ನೀವೆಲ್ಲರೂ ಏನು ಮಾಡುತ್ತಿದ್ದೀರಾ? ನಾನು ನಿಂತಿದ್ದೇನೆ, ದಯಮಾಡಿ ಸುಮ್ಮನಿರಿ ಕುಳಿತುಕೊಳ್ಳಿ. ನಾನು ನಿಂತಾಗಲೂ ಏತಕ್ಕಾಗಿ ಕೂಗುತ್ತಿದ್ದೀರಿ?

(ಗೊಂದಲ)

**ಸಭಾಪತಿಯವರು:-** ನೋಡಿ, ನೀವು ಹೇಳುವಂತಹ ಯಾವುದೇ ಮಾತುಗಳು ರೆಕಾರ್ಡ್‌ಗೆ ಹೋಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ನಿಂತಿದ್ದರೂ ಸಹ ಈ ರೀತಿ ಕೂಗುತ್ತಿದ್ದೀರಾ? ಪ್ರತಿಯೊಂದಕ್ಕೂ ಒಂದು ಮಿತಿ ಇರುತ್ತದೆ. ನಿಮಗೆ ಸಮಾಧನ ಇಲ್ಲ ಎಂದು ಕಾಣುತ್ತದೆ ಆದಕಾರಣ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದ್ದೇನೆ.

**ಸಭಾಪತಿಯವರು:-** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**ಸದನವನ್ನು ಬೆಳಿಗ್ಗೆ 11:40 ರಲ್ಲಿ ನಿಮಿಷಗಳ ಕಾಲ ಮುಂದೂಡಲಾಯಿತು.**